# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\8503\2015\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:02/03/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ತೋಪಯ್ಯ, ಮರಳೇನಹಳ್ಳಿ, ಶಿರಾ ಗೇಟ್, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆ ಶಿರಾ ಗೇಟ್ ಮರಳೇನಹಳ್ಳಿಯ ನಿವಾಸಿಯಾದ ಶ್ರೀ.ತೋಪಯ್ಯ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಮತ್ತು ತಾಲ್ಲೂಕ್ 1) ತಹಶೀಲ್ದಾರ್‌ರಾದ ಶ್ರೀ.ಶ್ರೀನಿವಾಸ, 2) ಭೂ ದಾಖಲೆಗಳ ಸಹಾಯಕ ನಿರ್ದೇಶಕರಾದ ಶ್ರೀಮತಿ.ರೇವತಿ ಕಪ್ಲಿ ಮತ್ತು 3) ತಾಲ್ಲೂಕ್ ಕಛೇರಿಯ ಸರ್ವೆ ಫರ್ಯಾವೇಕ್ಷಕರಾದ ಶ್ರೀ.ದೇವರಾಜು (ಇನ್ನು ಮುಂದೆ "1 ರಿಂದ 3ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ಮತ್ತು ತಾಲ್ಲೂಕ್ ಕಸಬಾ ಹೋಬಳಿ ಮರಳೇನಹಳ್ಳಿ ಗ್ರಾಮದ ಸರ್ವೆ ನಂ.70/3ರ ಜಮೀನು ದೂರುದಾರರ ಹೆಸರಿನಲ್ಲಿದ್ದು, ಸದರಿ ಜಮೀನನ್ನು ಅಳತೆ ಮಾಡಿ, ಹದ್ದುಬಸ್ತು ಗುರುತಿಸುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ—

ದೂರುದಾರರು ನೀಡಿದ ದೂರಿಗೆ ಸಂಬಂಧಪಟ್ಟಂತೆ ಸದರಿ ಸರ್ವೆ ನಂಬರಿನ ಆರ್‌ಟಿಸಿ ತಿದ್ದುಪಡಿಯಾಗಬೇಕಿರುವುದರಿಂದ, ಸಂಬಂಧಿಸಿದ ಆರ್‌ಟಿಸಿ ಶಾಖೆಗೆ ಕಳುಹಿಸಿದ್ದು, ಆ ನಂತರ ಆರ್‌ಟಿಸಿ ತಿದ್ದುಪಡಿಯಾಗಿ ಬಂದಿದೆ. ಅದರಂತೆ, ಮೋಜಣಿ ತಂತ್ರಾಂಶದಲ್ಲಿ ಆಧ್ಯತೆ ಮೇರೆಗೆ ಶ್ರೀ.ಗೋಪಾಲಕೃಷ್ಣ, ಭೂಮಾಪಕರಿಗೆ ಅಳತೆಗೆ ದಿ:07/10/15ರಂದು ದಿನಾಂಕ ನಿಗಧಿಪಡಿಸಿ, ಅಳತೆ ಕಾರ್ಯವು ಸಹ ಮುಕ್ತಾಯಗೊಂಡಿರುವುದಾಗಿ ಹೇಳಿದ್ದಾರೆ.

4. ಎರಡು (2) ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಸದರಿ ಜಮೀನಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆ ತಿದ್ದುಪಡಿಯಾಗಿ ಬಂದಿದ್ದು, ಮೋಜಣಿ ತಂತ್ರಾಂಶದಲ್ಲಿ ಆಧ್ಯತೆ ಮೇರೆಗೆ ಶ್ರೀ.ಗೋಪಾಲಕೃಷ್ಣ, ಪರವಾನಗಿ ಭೂಮಾಪಕರಿಗೆ ವಿತರಿಸಿದ್ದು, ಸದರಿಯವರು ದಿ:07/10/15ರಂದು ಅಳತೆಗೆ ನಿಗಧಿಪಡಿಸಿದ್ದಾರೆಂದು ಹೇಳಿದ್ದಾರೆ.

5. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ –

ತುಮಕೂರು ಜಿಲ್ಲೆ ಮತ್ತು ತಾಲ್ಲೂಕ್ ಕಸಬಾ ಹೋಬಳಿ ಮರಳೇನಹಳ್ಳಿ ಗ್ರಾಮದ ಸರ್ವೆ ನಂ.70/3ರ ಜಮೀನು ತಮ್ಮ ಹೆಸರಿನಲ್ಲಿದ್ದು, ಸದರಿ ಜಮೀನನ್ನು ಅಳತೆ ಮಾಡಿ, ಹದ್ದುಬಸ್ತು ಗುರುತಿಸುವಲ್ಲಿ ಆಧ್ಯತೆ ಮೇರೆಗೆ ಕ್ರಮ ಕೈಗೊಳ್ಳಲು ಮೋಜಣಿ ತಂತ್ರಾಂಶದಲ್ಲಿ ಶ್ರೀ.ಗೋಪಾಲಕೃಷ್ಣ, ಪರವಾನಗಿ ಭೂಮಾಪಕರಿಗೆ ವಿತರಿಸಿದೆ, ಅದರಂತೆ ದಿ:07/10/15ರಂದು ಅಳತೆಗೆ ನಿಗಧಿಪಡಿಸಿದ್ದು, ಆದರೆ ಸದರಿ ಅಳತೆ ಕಾರ್ಯ ಪೂರೈಸಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ.

7. ಆದ್ದರಿಂದ, ಸದರಿ ಜಮೀನಿನಲ್ಲಿ ಅಳತೆ ಕಾರ್ಯ ಪೂರೈಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 2/3/12.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**